<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 1980-24** **ಪಿಡಬ್ಲ್ಯೂ ಃ** <u>**3**</u>

**ಸಿಡಬ್ಲ್ಯೂ ಃ** <u>**8**</u>

ಸಾಕ್ಷಿದಾರರ ಹೆಸರು ಃ ವೆಂಕಟೇಶ ಹಂಚಾಟೆ

ತಂದೆ ಹೆಸರು ಃ ವಿಷ್ಣುಪಂತ

ವಯಸ್ಸು ಃ 48 ವರ್ಷ

ಉದ್ಯೋಗ ಃ ಟೇಲರಿಂಗ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಮಾಣಿಕ ನಾರಾಯಣರಾವ ಹಂಚಾಟೆ ನಮ್ಮ ದೊಡ್ಡಪ್ಪನ ಮಗ. ಅವರು ಅಪಘಾತ ದಲ್ಲಿ ಮರಣ ಹೊಂದಿದ್ದಾರೆಂದು ಚಾಸಾ-9 ರವರು ಫೋನ್ ಮೂಲಕ ದಿಃ 08.01.2024 ರಂದು ವಿಷಯ ತಿಳಿಸಿದರು. ಜೆ ಕೆ ಶಾಲೆ ಬಳಿ ಕಾರಿನಿಂದ ಅಪಘಾತ ವಾಗಿದೆ ಎಂದು ಹೇಳಿದರು. ಕಾರಿನ ಮಾಲಿಕ ಹಾಗೂ ಚಾಲಕ ಯಾರೆಂದು ಗೊತ್ತಿಲ್ಲ. ನಾನು ಈ ಕುರಿತು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಕೆಎ-05 ಎಂ ಟಿ -6641 ನೇದ್ದರ ಕಾರಿನಿಂದ ಅಪಘಾತ ವಾಗಿದೆ ಅಂದರೆ ಗೊತ್ತಿಲ್ಲ. ಕಾರ ಚಾಲಕ ಅತಿ ವೇಗ ಅಲಕ್ಷ್ಯತನದಿಂದ ಚಾಲನೆ ಮಾಡಿ ಅಪಘಾತ ಪಡಿಸಿದ್ದಾನೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಆ ದಿನ ಕಾರಿನ ಚಾಲಕ ಇದ್ದರು ಅಂದರೆ ಸರಿಯಲ್ಲ. ಈ ಕುರಿತು ನಾನು ದಿಃ 8.1.2024 ರಂದು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ.

ಹೇಳಿಕೆ ಭಾಗವನ್ನು ನಿಪಿ.13 ಎಂದು ಗುರುತಿಸಲಾಯಿತು. ನಿಪಿ.13 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ** ಏನೂ ಇಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 1980-24** **ಪಿಡಬ್ಲ್ಯೂ ಃ** **4**

**ಸಿಡಬ್ಲ್ಯೂ ಃ** **9**

ಸಾಕ್ಷಿದಾರರ ಹೆಸರು ಃ ವೃಶಾಲಿ ಹಂಚಾಟೆ

ಗಂಡನ ಹೆಸರು ಃ ಮಾಣಿಕ

ವಯಸ್ಸು ಃ 54 ವರ್ಷ

ಉದ್ಯೋಗ ಃ ಮನೆಗೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಮಾಣಿಕ ರವರು ನನ್ನ ಗಂಡ. ದಿಃ 8.1.2024 ರಂದು ಬೆಳಗಿನ ಜಾವ 5.30 ಗಂಟೆಗೆ ನನ್ನ ಗಂಡ ವಾಕಿಂಗ ಗೆ ಹೋಗಿದ್ದರು. 7 ಗಂಟೆಯಾದರೂ ಮನೆಗೆ ಬರದಿದ್ದರಿಂದ ನಾನು ನನ್ನ ಮಗ ರಾಹುಲ್ ಈತನಿಗೆ ನಿನ್ನ ತಂದೆಯವರು ಮನೆಗೆ ಬಂದಿಲ್ಲ. ನೀನು ಅವರು ವಾಕಿಂಗ ಮಾಡುವ ಜಾಗಕ್ಕೆ ನೋಡಿಕೊಂಡು ಬಾ ಎಂದು ಹೇಳಿದ್ದೆನು. ಆಗ ನನ್ನ ಮಗ ರಾಹುಲ್ ಬೈಕ್ ತೆಗೆದುಕೊಂಡು ಹೋದನು. ನಂತರ 7.30 ಗಂಟೆಗೆ ನನ್ನ ಮಗ ಫೋನ್ ಮಾಡಿ ತಂದೆಗೆ ಅಪಘಾತ ವಾಗಿದೆ ಕಿಮ್ಸ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗುತ್ತಿದ್ದೇನೆ. ನೀವು ಬನ್ನಿ ಎಂದು ಹೇಳಿದನು. ನನಗೆ ಆ ವಿಷಯ ಕೇಳಿ ಎಚ್ಚರಿಕೆ ತಪ್ಪಿತು. ಜೆ ಕೆ ಶಾಲೆ ಹಿಂದುಗಡೆ ಅಪಘಾತ ವಾಗಿದೆ ಎಂದು ಗೊತ್ತಾಯಿತು. ಅಪಘಾತ ಯಾರು ಮಾಡಿದ್ದಾರೆಂದು ಗೊತ್ತಿಲ್ಲ ಹಾಗೂ ಯಾವ ವಾಹನದಿಂದ ಅಪಘಾತ ವಾಗಿದೆ ಎಂದು ಗೊತ್ತಿಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಉಳಿದ ವಿಷಯ ನನ್ನ ಮಗನಿಗೆ ಗೊತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಕೆಎ-05 ಎಂ ಟಿ -6641 ನೇದ್ದರ ಕಾರಿನಿಂದ ಅಪಘಾತ ವಾಗಿದೆ ಅಂದರೆ ಸರಿ.  ಕಾರ ಚಾಲಕ ಅತಿ ವೇಗ ಅಲಕ್ಷ್ಯತನದಿಂದ ಚಾಲನೆ ಮಾಡಿ ಅಪಘಾತ ಪಡಿಸಿದ್ದಾನೆ ಅಂದರೆ ಗೊತ್ತಿಲ್ಲ.  ನ್ಯಾಯಾಲಯದ ಮುಂದಿರುವ ಆರೋಪಿ ಆ ದಿನ ಕಾರಿನ ಚಾಲಕ ಇದ್ದರು ಅಂದರೆ ಗೊತ್ತಿಲ್ಲ.  ಈ ಕುರಿತು ನಾನು ದಿಃ 8.1.2024 ರಂದು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ.  ಹೇಳಿಕೆ ಭಾಗವನ್ನು ನಿಪಿ.14 ಎಂದು ಗುರುತಿಸಲಾಯಿತು.  ನಿಪಿ.14 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ** ಏನೂ ಇಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 1980-24**

**ಪಿಡಬ್ಲ್ಯೂ ಃ 5**

**ಸಿಡಬ್ಲ್ಯೂ ಃ 10**

ಸಾಕ್ಷಿದಾರರ ಹೆಸರು ಃ ಆಶೀಫ ಯಾದವಾಡ

ತಂದೆ ಹೆಸರು ಃ ಇಮಾಮಹುಸೇನ

ವಯಸ್ಸು ಃ 52 ವರ್ಷ

ಉದ್ಯೋಗ ಃ ಖಾಸಗಿ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 8.1.2024 ರಂದು ನಾನು ಜೆ ಕೆ ಶಾಲೆ ಹಿಂದುಗಡೆಗೆ ಪಾಟೀಲ ಲೇಔಟ್ ಕಡೆಗೆ ಪಾರ್ಕಿಂಗ ಗೆ ಹೊರಟಿದ್ದೆನು. ಅಂದಾಜು ಸಮಯ 6.30 ಗಂಟೆಗೆ ನಾನು ವಾಕಿಂಗ ಮಾಡುತ್ತಿದ್ದಾಗ ನನ್ನಿಂದ 80-100 ಮೀಟರ ದೂರದಲ್ಲಿ ಮಾಣಿಕ ಹಂಚಾಟೆ ರವರು ವಾಕಿಂಗ ಮಾಡುತ್ತಿದ್ದರು. ಸದರಿ ಕಾಲಕ್ಕೆ ಕಾರ ನಂಃ ಕೆಎ-05/ಎಂ ಟಿ /6641 ಸಾಯಿನಗರದಿಂದ ಬಂದು ಮಾಣಿಕ ಹಂಚಾಟೆ ರವರಿಗೆ ಡಿಕ್ಕಿಪಡಿಸಿತು. ಅಪಘಾತ ಪಡಿಸಿದ ಕಾರ್ ಚಾಲಕ ಕೆಳಗೆ ಇಳಿದನು. ಪುನಃ ಕಾರ್ ಹತ್ತಿಕೊಂಡು ಗೋಪನಕೊಪ್ಪ ರೋಡಿನ ಕಡೆಗೆ ಹೋದನು. ಅಲ್ಲಿದ್ದ ಜನರು ಅಂಬುಲೆನ್ಸ ಮೂಲಕ ಗಾಯಾಳುವನ್ನು ಆಸ್ಪತ್ರೆಗೆ ಕಳಿಸಿಕೊಟ್ಟರು. ನಾನು 4-5 ದಿನಗಳ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ಆ ದಿನ ನಾನು ಪೋಲಿಸ ಠಾಣೆ ಯಲ್ಲಿ ಕಾರ್ ಚಾಲಕನನ್ನು ಗುರುತಿಸಿದ್ದೇನೆ. ಕಾರ್ ಚಾಲಕನ ಹೆಸರು ವಿಶ್ವನಾಥ ಚನ್ನಳ್ಳಿ ಎಂದು ಗೊತ್ತಾಯಿತು. ಆ ದಿನ ವಿಶ್ವನಾಥ ಚನ್ನಳ್ಳಿ ಜೊತೆಗೆ ರವಿ ಡಂಬಳ ಇದ್ದರು. ನಾನು ಯಾರು ಇದ್ದರು ಎಂದು ಚಾಲಕನನ್ನು ಗುರುತಿಸಿ ಬಂದಿದ್ದೇನೆ. ನಾನು ಈ ಕುರಿತು ಹೇಳಿಕೆ ಹಾಗೂ ಪುನರ ಹೇಳಿಕೆ ನೀಡಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿ ರವಿ ಡಂಬಳ ಎಂದು ಇದ್ದು ಅವರು ಕಾರ ಮಾಲಿಕರಾಗಿದ್ದಾರೆ. ನ್ಯಾಯಾಲಯದ ಮುಂದಿರುವ ಆರೋಪಿ ಆ ದಿನ ಕಾರ ಚಾಲನೆ ಮಾಡಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 1980-24** **ಪಿಡಬ್ಲ್ಯೂ ಃ** <u>**6**</u>
**ಸಿಡಬ್ಲ್ಯೂ ಃ** <u>**11**</u>

ಸಾಕ್ಷಿದಾರರ ಹೆಸರು ಃ ಪ್ರಕಾಶ ಗಾಣಿಗೇರ

ತಂದೆ ಹೆಸರು ಃ ಮಹಾದೇವಪ್ಪ

ವಯಸ್ಸು ಃ 49 ವರ್ಷ

ಉದ್ಯೋಗ ಃ ಕೂಲಿ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಅಪಘಾತ ವನ್ನು ನೋಡಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿಲ್ಲ. ನಾನು ಹೇಳಿಕೆ ಹಾಗೂ ಪುನರ್ ನೀಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 8.1.2024 ರಂದು ಬೆಃ 6 ಗಂಟೆಗೆ ನಾನು ಜೆ ಕೆ ಶಾಲೆ ಬಳಿ ವಾಕಿಂಗ ಮಾಡುತ್ತಿದ್ದಾಗ ಕಾರ್ ನಂಃ ಕೆಎ-05 / ಎಂ ಟಿ -6641 ನೇದ್ದರ ಚಾಲಕ ಕಾರನ್ನು ವೇಗ – ನಿರ್ಲಕ್ಷ್ಯತನದಿಂದ ಚಲಾಯಿಸಿ ಪಾದಚಾರಿ ಮಾಣಿಕ ರವರಿಗೆ ಡಿಕ್ಕಿಪಡಿಸಿದೆ ಅಂದರೆ ಸರಿಯಲ್ಲ. ವಿರುಪಾಕ್ಷ ಎಂಬುವವರು ಅಂಬುಲೆನ್ಸ ಪೋನ್ ಮಾಡಿ ಗಾಯಾಳುವನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದಾರೆ ಅಂದರೆ ಸರಿಯಲ್ಲ. ಈ ಕುರಿತು ನಾನು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ದಿಃ 13.01.2024 ರಂದು ನ್ಯಾಯಾಲಯದ ಮುಂದಿರುವ ಆ ಆರೋಪಿ ಆ ದಿನ ಕಾರ್ ಚಾಲಕ ಇದ್ದಾನೆಂದು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಹೇಳಿಕೆ - ಪುನರ್ ಹೇಳಿಕೆಯನ್ನು ನಿಪಿ.15 ಹಾಗೂ 16 ಎಂದು ಗುರುತಿಸಲಾಯಿತು. ನಿಪಿ.15 ಹಾಗೂ 16 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**C.C. - 1980-24** **ಪಿಡಬ್ಲ್ಯೂ : 7**

**ಸಿಡಬ್ಲ್ಯೂ : 12**

ಸಾಕ್ಷಿದಾರರ ಹೆಸರು : ಮಹೇಶ ಮುಗಳಿ

ತಂದೆ ಹೆಸರು : ಕಲ್ಲಿನಾಥ

ವಯಸ್ಸು : 48 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಹುಬ್ಬಳ್ಳಿ- ಮಧುರಾ ಪಾರ್ಕ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಅಪಘಾತ ವನ್ನು ನೋಡಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿಲ್ಲ. ನಾನು ಹೇಳಿಕೆ ಹಾಗೂ ಪುನರ್ ನೀಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 8.1.2024 ರಂದು ಬೆಃ 6 ಗಂಟೆಗೆ ನಾನು ಜೆ ಕೆ ಶಾಲೆ ಬಳಿ ವಾಕಿಂಗ ಮಾಡುತ್ತಿದ್ದಾಗ ಕಾರ್ ನಂಃ ಕೆಎ-05 / ಎಂ ಟಿ -6641 ನೇದ್ದರ ಚಾಲಕ ಕಾರನ್ನು ವೇಗ – ನಿರ್ಲಕ್ಷ್ಯತನದಿಂದ ಚಲಾಯಿಸಿ ಪಾದಚಾರಿ ಮಾಣಿಕ ರವರಿಗೆ ಡಿಕ್ಕಿಪಡಿಸಿದೆ ಅಂದರೆ ಸರಿಯಲ್ಲ. ವಿರುಪಾಕ್ಷ ಎಂಬುವವರು ಅಂಬುಲೆನ್ಸ ಪೋನ್ ಮಾಡಿ ಗಾಯಾಳುವನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದಾರೆ ಅಂದರೆ ಸರಿಯಲ್ಲ. ಈ ಕುರಿತು ನಾನು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ದಿಃ 13.01.2024 ರಂದು ನ್ಯಾಯಾಲಯದ ಮುಂದಿರುವ ಆ ಆರೋಪಿ ಆ ದಿನ ಕಾರ್ ಚಾಲಕ ಇದ್ದಾನೆಂದು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಹೇಳಿಕೆ - ಪುನರ್ ಹೇಳಿಕೆಯನ್ನು ನಿಪಿ.17 ಹಾಗೂ 18 ಎಂದು ಗುರುತಿಸಲಾಯಿತು. ನಿಪಿ.17 ಹಾಗೂ 18 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.